

# ಕೃತಘ್ನ ಮಾನವರು

ಮರಿ ಕಪ್ಪೆ ಮೂರು ದಿನಗಳಿಂದ ಹೊರಗೆ ಆಡಲು ಹೋಗಲಿಲ್ಲ. ಖಿನ್ನ ವದನದಿಂದ ಮನೆಯಲ್ಲಿರುವುದನ್ನು ನೋಡಿದ ಅವಳ ಅಮ್ಮ 'ಪುಟ್ಟಿ ನಿನ್ನನ್ನು ಮೂರು ದಿನಗಳಿಂದ ಗಮನಿಸುತ್ತಿದ್ದೇನೆ. ಹೊರಗೆ ಗೆಳೆಯರೊಂದಿಗೆ ಆಟವಾಡಲು ಏಕೆ ಹೋಗುವುದಿಲ್ಲ?' ಎಂದು ಕೇಳಿತು.

'ಅಮ್ಮಾ, ನಾನು ಹೊರಗೆ ಆಟವಾಡಲು ಹೋಗುವುದಿಲ್ಲ. ಏಕೆಂದರೆ ದುಷ್ಟ ಮಾನವರು ನಗರದಿಂದ ಬಂದಿರುವರು. ನಮ್ಮನ್ನು ಹಿಡಿದುಕೊಂಡು ಹೋಗುತ್ತಾರೆ. ಈಚೆಗೆ ನಾವು ಬಯಲಲ್ಲಿ ಅಟವಾಡುತ್ತಿರುವಾಗ ನಮ್ಮ ನಾಲ್ಕು ಗೆಳೆಯರನ್ನು ಮಾನವರು ಹಿಡಿದುಕೊಂಡು ತಮ್ಮ ಕೈ ಚೀಲದಲ್ಲಿ ಹಾಕಿಕೊಂಡು ಹೋದರು. ನಾನು ಹಾಗೂ ನನ್ನ ಗೆಳೆಯರಿಬ್ಬರೂ ತಪ್ಪಿಸಿಕೊಂಡು ಬಂದೆವು. ನಮಗೆ ತುಂಬ ಬೇಸರವಾಯ್ತು' ಎಂದಿತು ಮರಿ ಕಪ್ಪೆ.

'ಯಾಕೆ ಮನುಷ್ಯರು ನಿಮ್ಮನ್ನು ಹಿಡಿದುಕೊಂಡು ಹೋಗುತ್ತಾರೆ'? ಅಮ್ಮ ಕಪ್ಪೆ ಕೇಳಿತು.

'ಅಮ್ಮ, ಅವರು ನಮ್ಮನ್ನು ಕಾಲೇಜ್ ಹಾಗೂ ಇತರ ಕಡೆಗಳಲ್ಲಿ ಪ್ರಯೋಗಾಲಯಗಳಲ್ಲಿ ಛೇದಿಸುತ್ತಾರೆ. ಇನ್ನು ಕೆಲವರು ನಮ್ಮ ಕಾಲುಗಳನ್ನು ಕತ್ತರಿಸಿ ವಿದೇಶಕ್ಕೆ ಕಳಿಸುತ್ತಾರಂತೆ. ಅವರಿಗೆ ಅಲ್ಲಿಂದ ವಿಫುಲ ಹಣ ಲಭಿಸುತ್ತದೆ ಎಂದು ಗೆಳೆಯರು ಹೇಳುತ್ತಾರೆ' ಎಂದಿತು ಪುಟ್ಟಿ ಕಪ್ಪೆ.

'ಪುಟ್ಟೀ, ದುಷ್ಟ ಮಾನವರು ಮಹಾಸ್ವಾರ್ಥಿಗಳು. ಹಣದ ಆಸೆಗಾಗಿ ಏನು ಮಾಡುವುದಕ್ಕೂ ಅವರು ಹೇಸುವುದಿಲ್ಲ. ನಮ್ಮ ಶತ್ರುಗಳು ಆಮೆ, ಕೊಕ್ಕರೆ ಮತ್ತು ಹಾವು ಎಂದು ತಿಳಿದಿದ್ದೆ. ಈಗ ಮಾನವರೂ ನಮ್ಮ ಶತ್ರುಗಳೆಂಬುದನ್ನು ಕೇಳಿ ನನಗೆ ಅಚ್ಚರಿ ಆಯಿತು. ಮಾನವರು ಕೃತಘ್ನರು. ಅಂದರೆ ನಾವು ಅವರಿಗೆ ಮಾಡುವ ಹಲವಾರು ಬಗೆಯ ಉಪಕಾರವನ್ನು ಸ್ಮರಿಸುವುದಿಲ್ಲ. ನಮಗೆ ಕೇಡು ಬಯಸುವವರು. ನಮಗೆ ಅವರೇ ಕೃಷಿಕರ ಗೆಳೆಯ ಎಂದು ಹೇಳುತ್ತಾರೆ. ನಾವು ಹೊಲ ಗದ್ದೆಗಳಲ್ಲಿರುವ ಬೆಳೆಗಳನ್ನು ಭಕ್ಷಿಸುವ ಕ್ರಿಮಿ, ಕೀಟಗಳನ್ನು ತಿನ್ನುವುದರಿಂದ ಬೆಳೆಗಳ ರಕ್ಷಣೆ ಮಾತ್ರವಲ್ಲ ಪರಿಸರದ ರಕ್ಷಣೆಯೂ ಆಗುತ್ತದೆ'.

'ಮಾನವರಿಗೆ ಮಳೆಗಾಲದ ಸೂಚನೆಯನ್ನು ವಿಶಿಷ್ಟ ಶಬ್ದ, ನಾದದ ಮೂಲಕ ತಿಳಿಸುತ್ತೇವೆ. ನಮ್ಮ ಬಂಧುಗಳ ವಾಸ, ಕೆರೆ ನದಿಗಳಲ್ಲಿ, ಹಾಗೂ ಬಾವಿಯಲ್ಲಿಯೂ ಇರುತ್ತದೆ. ಕೆರೆ, ನದಿ, ಬಾವಿಯಲ್ಲಿನ ನೀರನ್ನು ಅಶುದ್ಧಗೊಳಿಸುವ ಹುಳು, ಕ್ರಿಮಿಗಳನ್ನು ನಾವು ಭಕ್ಷಿಸುತ್ತೇವೆ. ಹೀಗೆ ಹಲವಾರು ಬಗೆಯಲ್ಲಿ ನಾವು ಮಾನವರಿಗೆ ಉಪಕರಿಸುತ್ತೇವೆ. ಆದರೂ ಅವರು ನಮ್ಮ ನೆರವನ್ನು ಸ್ಮರಿಸದಿರುವುದರಿಂದ ಅವರು ಕೃತಘ್ನರೇ ಸರಿ. ದೇವರೇ ಅವರಿಗೆ ಶಿಕ್ಷೆ ನೀಡಲಿ' ಎಂದಿತು ಅಮ್ಮ ಕಪ್ಪೆ.

**■ ಸದಾನಂದ ಹೆಗಡೆಕಟ್ಟೆ, ಮೂಡುಬಿದರೆ**